

ಗಿಡಗಳ ಮೇಲಿರುವ ಮಂಗಗಳು ನೆಲದ ಮೇಲೆ ವಾಸಿಸತೊಡಗಿ ಬಾಲ ಕಳೆದುಕೊಂಡವಲ್ಲಾ, ಆ ತರಹ ಪ್ರಕ್ರಿಯೆ ಈ ಜೀವಿಗಳಲ್ಲೂ ಆಯ್ತು."

"ಓ ಉತ್ಕ್ರಾಂತಿ!..." ಎಂದರು ಇಬ್ಬರೂ.

"ಹಾಂ, ಏನೋ ಅಂಥದ್ದು. ಈ ಜೀವಿಗಳು ತಮ್ಮ ಚರ್ಮದಿಂದಲೇ ಉಸಿರಾಡತೊಡಗಿದವು. ಹೀಗಾಗಿ ಶ್ವಾಸಕೋಶಗಳು ಸಣ್ಣಗಾಗತೊಡಗಿದವು. ನೀರಿನಲ್ಲಿ ಹೆಚ್ಚೆಚ್ಚು ಹೊತ್ತು ಇರಲು ಅನುಕೂಲವಾಗುವಂತೆ ಇತರ ಅವಯವಗಳು ಮಾರ್ಪಾಡಾದವು. ಮನುಷ್ಯರಂತಾದವು."

"ಅದಾಯ್ತು. ಡಾ. ವಿಲ್ಹೆಮ್ ಅವರ ಕತೆ ಅಲ್ಲೇ ಉಳಿಯಿತಲ್ಲ?" – ಮಿಮಿ ಕೇಳಿದಳು.